# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## -:ವಾರ್ಡ್-37ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-

**ದಿನಾಂಕ: 05.11.2022 ರಂದು ಬೆಳಗ್ಗೆ 11.00 ಗಂಟೆಗೆ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಯಶವಂತಪುರ ಉಪ ವಿಭಾಗ, 2ನೇ ಮಹಡಿ, ಬಿಬಿಎಂಪಿ ವಾಣಿಜ್ಯ ಸಂಕೀರ್ಣ (ಆರ್‌ಟಿಓ ಕಾಂಪ್ಲೆಕ್ಸ್), ಯಶವಂತಪುರ ಇಲ್ಲಿ ನಡೆಸಲಾಗಿದ್ದು, ಸದರಿ ಸಭೆಯ ಸಭಾ ನಡವಳಿಗಳು**

**ಸಭೆಗೆ ಹಾಜರಿದ್ದ ಮಾನ್ಯ ಸದಸ್ಯರು:-**

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಹುದ್ದೆ | ಪದನಾಮ | ಮೊ. ಸಂ. |
|---|---|---|---|---|
| 1 | ಶ್ರೀ ಎಂ. ವಿಘ್ನೇಶ್ವರ | ಸ.ಕಾ.ನಿ.ಅ., | ಅಧ್ಯಕ್ಷರು/ ವಾರ್ಡ್ ನೋಡಲ್ ಅಧಿಕಾರಿ | 9480688220 |
| 2 | ಹೇಮ ಎಸ್.ಟಿ. | ಸಹಾಯಕ ಅಭಿಯಂತರರು | ಸದಸ್ಯರು | 9480688037 |
| 3 | ಪ್ರಕಾಶ್ | ಕಂದಾಯ ಪರಿವೀಕ್ಷಕರು | ಸದಸ್ಯರು | |
| 4 | ರಂಜಿತ್ | ಕಿ.ಆ.ಪ. | ಸದಸ್ಯರು | |
| 5 | ಗೋವಿಂದರಾಜು | ಕಂದಾಯ ವಸೂಲಿಗಾರರು | ಸದಸ್ಯರು | |
| 6 | ಮಂಜುನಾಥ್ | ಬಿಡಬ್ಲ್ಯೂಎಸ್ಎಸ್‌ಬಿ ಇಲಾಖೆ ಪರವಾಗಿ | ಸದಸ್ಯರು | 9164747167 |
| 7 | ಮುರಳಿ | ಮೇಲ್ವಿಚಾರಕರು | ಸದಸ್ಯರು | 9739837711 |
| 8 | ಸತ್ಯವತಿ | ಲಿಂಕ್ ವರ್ಕರ್ | ಸದಸ್ಯರು | 8971674635 |
| 9 | ಸುಜಾತ | ಲಿಂಕ್‌ವರ್ಕರ್ | ಸದಸ್ಯರು | |
| 10 | ಕಾಂತರಾಜು | ಮಾರ್ಷಲ್ | ಸದಸ್ಯರು | 8105287135 |

ವಾರ್ಡ್-37ರ ವಾರ್ಡ್ ಸಮಿತಿ ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಕಾರ್ಯದರ್ಶಿಯವರು ಸ್ವಾಗತಿಸಿ ವಾರ್ಡ್ ಸಮಿತಿ ಸಭೆಯ ಮಾರ್ಗಸೂಚಿಗಳನ್ನು ಸಭೆಗೆ ಸ್ಥೂಲವಾಗಿ ವಿವರಿಸಿದರು.

ಮಾನ್ಯ ಅಧ್ಯಕ್ಷರು, ಸಭೆಯ ಸದಸ್ಯರುಗಳನ್ನು ಪರಸ್ಪರ ಪರಿಚಯ ಮಾಡಿಸಿ, ಮಾರ್ಗಸೂಚಿಯಂತೆ, ಈ ಕೆಳಗಿನ ವಿಷಯಗಳನ್ನು ಸಭೆಯ ಮುಂದಿಟ್ಟು ವಾರ್ಡ್ ಸಮಿತಿ ಸಭೆಯು ನಿರ್ವಹಿಸಬೇಕಾದ ಅಂಶಗಳನ್ನು ತಿಳಿಸಿ, ಅನುಸರಿಸಬೇಕಾದ ಕ್ರಮಗಳನ್ನು ಈ ಕೆಳಕಂಡಂತೆ ಕ್ರಮವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

1) ಕಾಮಗಾರಿ ಇಲಾಖೆ:

ವಾರ್ಡ್‌ನಲ್ಲಿ ಕೆಲವೊಂದು ರಸ್ತೆಗಳಲ್ಲಿ ಸಣ್ಣದಾದ ರಸ್ತೆಗುಂಡಿಗಳು ಕಂಡುಬಂದಿದ್ದು, ಕೂಡಲೇ ಅದನ್ನು ಮುಚ್ಚಲು ಸಂಬಂಧಪಟ್ಟ ವಾರ್ಡ್ ಸಹಾಯಕ ಅಭಿಯಂತರರಿಗೆ ರಸ್ತೆಗುಂಡಿಗಳನ್ನು ಮುಚ್ಚಲು ತುರ್ತಾಗಿ ಕ್ರಮಕೈಗೊಳ್ಳಲು ಸೂಚಿಸಿದರು.

ಡಿಸಿಲ್ಟಿಂಗ್ ಕಾಮಗಾರಿ ಪ್ರಗತಿಯಲ್ಲಿದೆ ಹಾಗೂ ಸಿಲ್ಟ್ & ಟ್ರ್ಯಾಕ್ಟರ್ ಕಾಮಗಾರಿಯು ಶೀಘ್ರದಲ್ಲಿ ಪ್ರಾರಂಭವಾಗುವುದು ಎಂದು ಸಹಾಯಕ ಅಭಿಯಂತರರು ಸಭೆಗೆ ತಿಳಿಸಿದರು.

2) ಘನತ್ಯಾಜ್ಯ ನಿರ್ವಹಣೆ ವಿಭಾಗ:

ಹಸಿ ಕಸ ಹಾಗೂ ಒಣ ಕಸ ವಿಂಗಡಣೆ ಮಾಡಲು ಹಾಗೂ ಮಳಿಗೆಗಳಲ್ಲಿ ಪ್ಲಾಸ್ಟಿಕ್ ನಿಷೇದ ಮಾಡುವಂತೆ ಜನರಲ್ಲಿ ಅರಿವನ್ನು ಮೂಡಿಸುತ್ತಿರುವುದಾಗಿ ಲಿಂಕ್ ವರ್ಕರ್ಸ್ ನೋಡಲ್ ಅಧಿಕಾರಿಗಳಿಗೆ ತಿಳಿಸಿದರು.

3) ಮಾರ್ಷಲ್ :

ಪ್ಲಾಸ್ಟಿಕ್ ಸೀಜ್ ಮಾಡಿ, ದಂಡ ವಿಧಿಸಿರುವುದಾಗಿ ನೋಡಲ್ ಅಧಿಕಾರಿಗಳಿಗೆ ತಿಳಿಸಿದರು. ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಬ್ಲ್ಯಾಕ್ ಸ್ಪಾಟ್‌ಗಳು ಹೆಚ್ಚಾಗಿದ್ದು, ರಾತ್ರಿ ವೇಳೆಯಲ್ಲಿ ಕಸ ಹಾಕುವವರಿಗೆ ದಂಡ ಹಾಕಲು ಸೂಚಿಸಿದರು.

4) ಬಿಡಬ್ಲ್ಯೂಎಸ್‌ಎಸ್‌ಬಿ:-

ಈಗಾಗಲೇ ತಿಳಿಸಿದಂತೆ, ಬಿಡಬ್ಲ್ಯೂಎಸ್‌ಎಸ್‌ಬಿ ರವರಿಗೆ ತಮ್ಮ ಇಲಾಖೆಯಿಂದ ಮಾಡಿದ ರಸ್ತೆ ಅಗೆತದ ಕಾಮಗಾರಿ ನಂತರ ರೆಸ್ಟೋರೇಷನ್ ಮಾಡಲು ತಿಳಿಸಿದರು.

5) ಕಂದಾಯ ಇಲಾಖೆ :

ಪ್ರತಿ ತಿಂಗಳ ಕಂದಾಯ ವಸೂಲಾತಿ ಬಗ್ಗೆ ಸಭೆಯಲ್ಲಿ ನೋಡಲ್ ಅಧಿಕಾರಿಗಳು ಹಾಜರಾಗಿದ್ದ ಕಂದಾಯ ಇಲಾಖೆಯವರೊಂದಿಗೆ ಚರ್ಚಿಸಿದರು.

**6) ರಸ್ತೆ ಅಗೆತ :**

ಬಿಡಬ್ಲ್ಯೂಎಸ್‌ಎಸ್‌ಬಿ, ಬೆಸ್ಕಾಂ, ಜಿಯೋ, ಬಿಎಸ್‌ಎನ್‌ಎಲ್ ಯಾವುದೇ ಇಲಾಖೆಯವರು ಬಿಬಿಎಂಪಿ ಅನುಮತಿ ಪಡೆಯದೇ ರಸ್ತೆ ಅಗೆತ ಮಾಡಿದ್ದಲ್ಲಿ ಬಿಬಿಎಂಪಿ ಕಾಲಕಾಲಕ್ಕೆ ಹೊರಡಿಸುವ ಆದೇಶದಂತೆ ದಂಡ ವಿಧಿಸಲಾಗುವುದು ಎಂದು ನೋಡಲ್ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು.

**7) ಸಾರ್ವಜನಿಕರ ಕುಂದುಕೊರತೆ:**

ಯಶವಂತಪುರ ಉಪ ವಿಭಾಗ ವ್ಯಾಪ್ತಿಯ ಜಾಲಹಳ್ಳಿ ಕೆರೆಯಲ್ಲಿ ಮೀನು ಸಾಕಾಣಿಕೆ ಅಭಿವೃದ್ಧಿ ಪಡಿಸಲು ಉದ್ದೇಶಿತ ಯಶವಂತಪುರ ಮೀನು ಉತ್ಪನ್ನ ಮತ್ತು ಮಾರಾಟಗಾರರ ಸಹಕಾರ ಸಂಘ ನಿಯಮಿತ ಸ್ಥಾಪಿಸುವ ಬಗ್ಗೆ ಚರ್ಚಿಸಲಾಯಿತು. ಅನುಮತಿ ನೀಡಲು ಸೂಚಿಸಿದೆ.

**8) ವಾರ್ಡ್ ಸಮಿತಿ ಸದಸ್ಯರು ಗೈರು ಹಾಜರಿ ಬಗ್ಗೆ:**

ವಾರ್ಡ್-37ರಲ್ಲಿ ನಡೆಸುವ ವಾರ್ಡ್ ಸಮಿತಿ ಸಭೆಗೆ ಬೆಸ್ಕಾಂ, ಆರೋಗ್ಯ, ಪೋಲೀಸ್ ಇಲಾಖೆ ಅಧಿಕಾರಿಗಳು ಗೈರು ಹಾಜರಾಗಿರುವುದನ್ನು ಗಂಭೀರವಾಗಿ ಪರಿಗಣಿಸಿದೆ.

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Hema S.T
ಸಹಾಯಕ ಅಭಿಯಂತರರು ಹಾಗೂ
ಸದಸ್ಯ ಕಾರ್ಯದರ್ಶಿ
ವಾರ್ಡ್ ಸಂಖ್ಯೆ:37

(ಎಂ. ವಿಘ್ನೇಶ್ವರ)
ಸ.ಕಾ.ನಿ.ಅ. ಹಾಗೂ
ವಾರ್ಡ್ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ:37